ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 23.

ಬೆಂಗಳೂರು, ಗುರುವಾರ, ಜೂನ್ ತಾ|| 11, ಸನ್ 1903.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟ್ಟು, ರೆಜಿಸ್ಟ್ರೇಷ್ ವ ಯಡ್ಯುಕೇಷ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ ಜಡ್ಜ್ರರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್ರರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸ್‌ಗಳು.

3ನೇ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇಕಾ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೇ ಜೂನ್ 1903.

ನಂ. 17188—ಲೋ. ಬೋ. ಪಿ. 822, ಸನ್ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ IIನೇ ನಂಬರ್ ರೆಗ್ಯುಲೇಷನಿನ 2ನೇ ಸೆಕ್ಷನಿಗೆ ಸೇರಿದ 1ನೇ ಸಬ್ ಸೆಕ್ಷನ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಜೆಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮೆ ಮಹಾರಾಜಾ ಸರ್ಕಾರದವರು ಹಾಸನದ ಡಿಸ್ಟ್ರಿಕ್ಟು ಆರಸೀಕೆರೆ ತಾಲ್ಲೂಕಿನ ತಿರುಪತಿಯಲ್ಲಿ ನಡೆಯುವ ಶ್ರೀ ವೆಂಕಟರಮಣಸ್ವಾಮಿಯ ರಥೋತ್ಸವಕ್ಕೆ 1903ನೇ ಜೂನ್ 29ನೇ ತಾರೀಖಿನ ಲಾಗಾಯತು ಜುಲೈ 11ನೇ ತಾರೀಖಿನ ವರಿವಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡೀಪಡಿಸುತ್ತಾರೆ.

ತಾರೀಖು 27ನೇ ಮೇ 1903.

ನಂ. 16867—ಲೋ. ಫಂ. 142–02, ಸ೯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೀಷ್ಷ ರೆಗ್ಯುಲೇಷನಿನ 6ನೇ ಸೆಕ್ಷ್ಷ ಅನುಸರಿಸಿ ಇದರಿಂದ ಪ್ರಸಿದ್ಧ ಪಡಿಸುವದೇನಂದರೆ, ಶಿವಮೊಗ್ಗ ಡಿಸ್ಟ್ರಿಕ್ಟಿನ ಸಿರಲೆ ಕೊಪ್ಪ ಮ್ಯುನಿಸಿಪಾಲಿಟಿಯಲ್ಲಿರುವ ಇದರಡೀ ಕಂಡ ಕಟ್ಟಡದ ನಿವೇಶನಗಳು ಸರ್ಕಾರ ಕೆಲಸಕ್ಕೆ ಅಂದರೆ, ಬಂಡಿಮೋಟನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತವೆ :—

ಮ್ಯುನಿಸಿಪಾಲಿಟಿಯ ಹೆಸರು.	ಖಾತೇದಾರ್ ವ ಮಾಲೀಕರ ಹೆಸರು.	ಕಟ್ಟಡದ ನಿವೇಶನದ ನಂ.	ವಿಸ್ತೀರ್ಣ. ಖಾಂಬಿ.	ರುಂದಿ.	ಜುಮ್ಲಾ ಚದರ ಗಜ ಜಾಗಳು.	ಬಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಸಿರಲೆಕೊಪ್ಪ	ಗರಗಿನ ಗಂಗಪ್ಪ ...	1	96	8	768	ಸೀನೀರು ಹೊಂಡದ ಏರಿ ಮತ್ತು ಹಳಿಯೂರಿಗೆ ಹೋಗುವ ಹಳ್ಳಿ ರಸ್ತೆ	ಗಾಣಿಗರ ಬಿದ್ರಿಯಪ್ಪನ ಕಟ್ಟಿಸಿದ ನಿವೇಶನ ನಂ. 15	ಹಳಿಯೂರಿನಿಂದ ಬೆಳಗಂಬಿಗೆ ಹೋಗುವ ಗಲ್ಲಿ	ಪ್ರೈಮರಿಸ್ಕೂಲ್ ಮತ್ತು ಗೌರ್ನಮೆಂಟ್ ಸ್ಕೂಲ್ ಕಾಂಪೌಂಡಿಗೆ ಸೇರಿದ ಜಾಗೆ
	ಚೌತಾಜಿ ರಾಮರಾವು ...	2	96	8	768				
	ಕದ್ರಮುಂಡಿಗೆ ಕೃಷ್ಣಪ್ಪ ..	3	96	8	768				
	ರಾಮಂಣ ..	4	96	8	768				
	ಬಸಪ್ಪ ..	5	96	8	768				
	ಕುರಬರ ಕರಿಯಪ್ಪ ..	6	96	8	768				
	ರಾಮರಾವು ಚೌತಾಜಿ ..	7	96	8	768				
	ಗರಗಿನ ಸಂಗಪ್ಪ ...	8	96	8	768				
	ಡಿಟೋ ..	9	96	8	768				
	ಅಂತಪ್ಪ ಜೋಯಿಸ	10	96	8	768				
	ವಲಿ ಕೊತ್ರಪ್ಪ ...	11	96	8	768				
	ಮಣಿಗಾರ್ ಗುರುರಾವು ..	12	96	8	768				
	ಚೌತಾಜಿ ಹುಚ್ಚ್ರರಾವು ..	13	96	8	768				
	ಲಕ್ಷ್ಮೀಶ್ವರದ ರಂಗರಾವು ..	14	96	8	768				
	ಜುಮ್ಲಾ ..	..	..	..	10752				

ತಾರೀಖು 4ನೇ ಜೂ೯ 1903.

ನಂ. 17214—ಲೋ. ಫಂ. 237–96, ಇದರಡೀ ಕಂಡ ದೊಡ್ಡ ಮನುಷ್ಯರುಗಳು 5 ವರುಷಗಳ ಕಾಲದ ವರಿಗೆ ಸೀರಾ ಟವ್ನ ಮ್ಯುನಿಸಿಪಲ್ ಬೋರ್ಡಿನ ಮೆಂಬರುಗಳಾಗಿ ಮೊಹರರ್ಕಡಲ್ಪಟ್ಟರುತ್ತಾರೆ :—

1. ಸಬ್ ರಿಜಿಸ್ಟ್ರಾರ್ರಾದ ಮೆ|| ನಾರಾಯಣಯ್ಯಂಗಾರ್ರವರು
2. ಜವಿರ್ದಾರ್ ಮತ್ತು ಕಂಟ್ರಾಕ್ಟುದಾರ್ರಾದ ಮೆ|| ಯರಗುಂಟಪ್ಪನವರು
3. ಜವಳಿ ವರ್ತಕರಾದ ಮೆ|| ಸೂರಪ್ಪನವರು

ತಾರೀಖು 4ನೇ ಜೂ೯ 1903.

ನಂ. 17220—ಮಿ. 2661, ಸಬ್ ಅಸಿಸ್ಟೆಂಟ್ ಸರ್ಜ್ಜರಾದ ಮೆ|| ವಿ. ಎಸ್. ಸಿದ್ದಪ್ಪನವರು ಮೂರನೇ ಕ್ಲಾಸಿನಲ್ಲಿ ಮೂರು ವರುಷಗಳ ತೃಪ್ತಿಕರವಾದ ನೌಕರಿಯು ಮಾಡಿರುವದರಿಂದ, 1897ನೇ ಸಪ್ಟಂಬರ್ 23ನೇ ಮರ್ಕುಂ 3868–9–ಮಿ. 736ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸಿನ 6ನೇ ಪ್ಯಾರಾ ಅನುಸರಿಸಿ ಎರಡನೇ ಕ್ಲಾಸಿಗೆ 1903ನೇ ಮಾರ್ಚಿ 21ನೇ ತಾರೀಖಿನಾರಭ್ಯ ಎರಡನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 8—9ನೇ ಜೂ೯ 1903.

ನಂ. 1971—ಜು. ಎಂ., ಲೆಫ್ಟಿನೆಂಟ್ ಪಿ. ಎಚ್. ಕ್ಲರ್ಕ್, ಐ. ಎಂ. ಎಸ್., ಯವರು, ಮೈಸೂರ ಸೀಮೆಯ ಕಾರಾಗೃಹಗಳ ಇನ್ಸ್ಪೆಕ್ಟರ್ ಜನರಲ್ ಯವರ ಆಫೀಸಿನ ಚಾರ್ಜ್ಜನ್ನು, 1903ನೇ ಮೇ 27ನೇ ತಾರೀಖಿನ ಮಧ್ಯಾಹ್ನಾತ್ಪರ ಲೆಫ್ಟಿನೆಂಟ್ ಕರ್ನಲ್ ಜೆ. ಸ್ಮೈತ್, ಐ. ಎಂ. ಎಸ್., ಇವರಿಗೆ ಒಪ್ಪಿಸಿರುತ್ತಾರೆ.

ತಾರೀಖು 8—9ನೇ ಜೂ೯ 1903.

ನಂ. 1974—ಜು. ಸೈ. 96—03, ಸ್ಪೆಷಿಯಲ್ ಸಬ್ ರಿಜಸ್ಟ್ರಾರ್ರುಗಳ ಇದರಡೀ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟರುತ್ತವೆ :—

1. ಎ. ಜೆ. ಸಿಂಗಾರವೇಲು ಮೊದಲಿಯಾರ್, ಬಿ. ಎ., ಯವರು, ಕೆಲಸದಿಂದ ನಿವೃತ್ತರಾದ ಟಿ. ಕೇಪಾದ್ರಿ ಅಯ್ಯಂಗಾರ್ರಿಗೆ ಬದಲಾಗಿ ಮೈಸೂರು ಸಿಟಿಯಿಂದ ಬೆಂಗಳೂರ ಸಿಟಿಗೆ.

2. ಎಚ್. ಚಿಂತಾಮಣಿರಾಯರು, ಎ. ಜೆ. ಸಿಂಗಾರವೇಲು ಮೊದಲಿಯಾರ್ರಿಗೆ ಬದಲಾಗಿ ಟಿ. ನರಸಿಪುರದಿಂದ ಮೈಸೂರು ಸಿಟಿಗೆ.

ತಾರೀಖು 9ನೇ ಜೂ೯ 1903.

ನಂ. 17324—ಲೋ. ಫಂ. 191—02, ಸ೯ 1903ನೇ ಜುಲೈ ಗುರ್ರೆ ತಾರೀಖಿನಾರಭ್ಯ ಮಾಡಲ್ಪಡುವ ಕೊಪ್ಪದ ಮ್ಯುನಿಸಿಪಲ್ ಬೋರ್ಡಿನ ಮೆಂಬರುಗಳ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸಲ್ಪಟ್ಟಿರುತ್ತದೆ:—

ಎಕ್ಸ್ ಅಫೀಷಿಯೋ.

1. ಕಡೂರು ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರವರು (ಪ್ರೆಸಿಡೆಂಟರವರು).
2. ಕೊಪ್ಪದ ತಾಲ್ಲೂಕಿನ ಅಮಲ್ದಾರ್ರವರು (ವೈಸ್ ಪ್ರೆಸಿಡೆಂಟರವರು).
3. ಕೊಪ್ಪದಲ್ಲಿರುವ ಮೆಡಿಕಲ್ ಆಫಿಸರವರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸೀನಿಯರ್ ಆಫಿಸರವರು.

ನೇಮಿಸಲ್ಪಟ್ಟವರು.

5. ಜಮೀನ್ದಾರ್ ಮತ್ತು ವರ್ತಕರಾದ ಮೆ॥ ಹಲಗಾರ್ ವೆಂಕಟಸುಬ್ಬಯ್ಯನವರು.
6. ಜಮೀನ್ದಾರ್ ಮತ್ತು ವರ್ತಕರಾದ ಮೆ॥ ಹಲಗಾರ್ ಸುಬ್ಬರಾಯರು.
7. ಜಮೀನ್ದಾರ್ ಮತ್ತು ವರ್ತಕರಾದ ಮೆ॥ ಚಿನ್ನವಾರ ದುಗ್ಗಪ್ಪಯ್ಯನವರು.
8. ಜಮೀನ್ದಾರ್ ಮತ್ತು ವರ್ತಕರಾದ ಮೆ॥ ಲಾಡರ್ ರಾಣಪ್ಪನವರು.
9. ಸಾಹುಕಾರ್ರು ಮತ್ತು ವರ್ತಕರಾದ ಮೆ॥ ಇಬ್ರಾಹಿಂಸಾಹೇಬರವರು.

ತಾರೀಖು 10ನೇ ಜೂ೯ 1903.

ನಂ. 17366—ಮಿ. 2693, ಲೆಫ್ಟಿನೆಂಟ್ ಕರ್ನಲ್ ಪಿ. ಹೆಚ್. ಬೆರ್ನರ್ಡ್, ಎಂ. ಬಿ., ಐ. ಎಂ. ಎಸ್., ಯವರು, ಮೈಸೂರು ಗವರ್ನ್ಮೆಂಟಿನ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರ ಆಫೀಸಿನ ಚಾರ್ಜ್ನನ್ನು 1903ನೇ ಮೇ 27ನೇ ತಾರೀಖಿನ ಮಧ್ಯಾಹ್ನಾತ್ಪರ ಬೆಂಗಳೂರಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಚಾರ್ಜಿನಲ್ಲಿರುವ ಸರ್ಜನ್ರಾದ ಲೆಫ್ಟಿನೆಂಟ್ ಕರ್ನಲ್ ಜೆ. ಸ್ಮೈತ್, ಎಂ. ಡಿ., ಐ. ಎಂ. ಎಸ್., ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 12ನೇ ಮೇ 1903.

ನಂ. ರೆ. 4196, ಸ೯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೇಷ್ನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ತಾಲ್ಲೂಕು ಉರ್ದುಗೆರೆ ಹೋಬಳಿಯ ಕೊಡಿಗೆಹಳ್ಳಿ ಗ್ರಾಮದಲ್ಲಿ ಮನೆಗಳನ್ನು ಕಟ್ಟುವ ಬಗ್ಯೆ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ತುಮಕೂರ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸರ್ವೆ ನಂ.	ಜಮೀನಿನ ವಿವರ ಮತ್ತು ವಿಸ್ತೀರ್ಣ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
							ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
ತುಮಕೂರು.	ಉರ್ದುಗೆರೆ.	ಕೊಡಿಗೆಹಳ್ಳಿ.	ಗೋಪಾಲಯ್ಯ.	74	ಖುಷ್ಕಿ. ಗುಂಟೆ. ಎಕರೆ. 6 — 16	ಗುಂಟೆ. ಎಕರೆ. 0 — 15	ಸರ್ವೆ ನಂ. 74ರ ಭಾಗ.	ಸರ್ವೆ ನಂ. 74ರ ಭಾಗ.	ಚೀಬರಂಗನ್ಗಿಗೆ ಸೇರಿದ ಜಮೀನು.	ಪಟಗಳ ಗಳ್ಳಿ

ತಾರೀಖು 12ನೇ ಮೇ 1903.

ನಂ. ರೆ. 4201, ಸ॥1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೇಷ್ಷ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಗಿರೋಲನ್ನು ಅಗಿಯುವ ಬಗ್ಯೆ ಮೈಸೂರು ಗವರ್ನ್‌ಮೆಂಟಿನ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರ್ರ ಹೆಸರು.	ಜಮೀನಿನ ವಿವರ.				ಚಕ್ಕುಬಂದಿ.				ಷರಾ.
				ಸರ್ವೆ ನಂ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ಜಮೀನಿನ ವಿಸ್ತೀರ್ಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
					ಎ. ಗು.	ರೂ ಆ. ಪೈ.	ಎ. ಗುಂ.					
ನಾಗಡಿ	ನಾಗಡಿ	ನಾಗಡಿ	ಕರ್ಣಿಕ ಕೃಷ್ಣಮೂರ್ತಿರಾಯರು	ಸರ್ವೆ ನಂ. 190 ಸಬ್ ನಂ. 3	..	12 0 4 0	... 12	ಬೆಂಗಳೂರಿಗೆ ಹೋಗುವ ರಸ್ತೆ	ನಿರಂಜನಸ್ವಾಮಿಗೆ ಸೇರಿದ ನಂ. 190ರ ಭಾಗ	ನಿರಂಜನಸ್ವಾಮಿಗೆ ಸೇರಿದ ನಂ. 190ರ ಭಾಗ	ಕಾವೇರಿ-ಬೆಂಗಳೂರ ರಸ್ತೆ	ನಿರಪಯುಕ್ತ ತಪ್ಪು ಫಂಡಿನಿಂದ ಕರ್ಷಿಸೇ ಹೊಲಿಗಳು ಕೊಡತಕ್ಕದ್ದು

ತಾರೀಖು 19ನೇ ಮೇ 1903.

ನಂ. ರೆ. 4259, ಸ॥1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೇಷ್ಷ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಕಾವೇರಿ ಪವರ್ ಸ್ಕೀಂ ಕೆಲಸಗಳ ಸಂಬಂಧಪಟ್ಟ ಬಂಗಲೆಯನ್ನು ಕಟ್ಟುವ ಬಗ್ಯೆ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರ್ರ ಹೆಸರು.	ಜಮೀನಿನ ತಪಸೀಲು.				ಚಕ್ಕುಬಂದಿ.				ಷರಾ.
				ವಿವರ.	ಸರ್ವೆ ನಂ.	ವಿಸ್ತೀರ್ಣ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
						ಎ.	ಗು.					
ಅನೇಕಲ್	ಸರ್ಜಾಪುರ	ಸರ್ಜಾಪುರ	ಹುನಿನೆಂಕಟಪ್ಪನ ಹಡನಾಳಿಯಲ್ಲಿ ಹುದ್ದಿನ ಜಾನ ಅನುಭವದಲ್ಲಿ	ಖುಷ್ಕಿ	319	1	15	ಸರ್ವೆ ನಂ. 319ರ ಭಾಗ ಮತ್ತು ಸರ್ವೆ ನಂ. 320 ಮತ್ತು 321	ಸರ್ವೆ ನಂ. 319 ಮತ್ತು ಸರ್ವೆ ನಂ. 318	ಸರ್ವೆ ನಂ. 322	ಸರ್ವೆ ನಂ. 319ರ ಭಾಗ	ಪೈರ್ವಿಪಿಯುಕ್ತ ಫಂಡಿನಿಂದ ಹೊ ಬಿಲಗು ಕೊಡತಕ್ಕದ್ದು

ತಾರೀಖು 8ನೇ ಜೂ॥ 1903.

ನಂ. ರೆ. 4450—ರೆ. ಫೈ. 104–1895, ಮೈಸೂರ ಸರ್ವಿಸ್ ರೆಗ್ಯುಲೇಷ್ಷಗಳ 188ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರ ತಾಲ್ಲೂಕಿನ ಅಮಲ್ದಾರ್‌ರಾದ ಮೆ॥ ಮಹಮ್ಮದ್ ರಜಾ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ತಾಲ್ಲೂಕು ಷಿರಸ್ತೆದಾರ್‌ರು ಸದರೀ ಅಮಲ್ದಾರ್‌ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಾಲ್ತಿ ಕೆಲಸಗಳನ್ನು ನೋಡತಕ್ಕದ್ದು.

ತಾರೀಖು 21ನೇ ಮೇ 1903.

ನಂ. ರೆ. 4294, ಸ೯1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೀಷ್ಷ ರೆಗ್ಯುಲೇಷನಿನ 6ನೇ ಸೆಕ್ಷ೯ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರ ಡಿಸ್ಟ್ರಿಕ್ಟಿನ ಶ್ಲಿರುವ ಚನ್ನಪಟ್ಣ ಟವನಿನ ಬಡಾವಣೆಗೋಸ್ಕರ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರಗ್ಯುಲೇಷನಿನ 7ನೇ ಸೆಕ್ಷ೯ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಮಾಲೀಕರ ಹೆಸರು.	ನಂಬರ್.	ವಿಸ್ತೀರ್ಣ. ಎ.	ವಿಸ್ತೀರ್ಣ. ಗು.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಷರಾ.
ಬೆಂಗಳೂರು	ಚನ್ನಪಟ್ಣ	ಕೋಟೆ ನರಸಿಂಹ	ರಾಯಲೆಟ್ಟಿಯ ಹೆಂಡತಿ ಲಿಂಗಮ್ಮ.	ಸರ್ವೆ ನಂ. 104 ಖುಷ್ಕಿ	....	28	ಚನ್ನಪಟ್ಣ ಪುರ್ವ	ಸರ್ಕಾರ ರಸ್ತೆ	ಚನ್ನಪಟ್ಣ ಪುರ್ವ	ಚನ್ನಪಟ್ಣ ಪುರ್ವ	ತೆಗದುಕೊಳ್ಳುವ ಬಗ್ಗೆ ಕೊಡುವ ನೋಟಿಸಿಗೆ ಯಾವ ಸಬೂಬಿಗೂ ಜಗ್ಗದೆ ಕೊಡತಕ್ಕ ಪ್ರಕಾರ ಕೊಡತಕ್ಕ ಪ್ರಕಾರ

ತಾರೀಖು 2ನೇ ಜೂ೯ 1903.

ನಂ. ರೆ. 4432, ಸ೯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೀಷ್ಷ ರೆಗ್ಯುಲೇಷನಿನ 6ನೇ ಸೆಕ್ಷ೯ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ಗೋಲ್ಡ್ ಫೀಲ್ಡ್ ವಾಟರ್ ಸಪ್ಲೈ ಪ್ರಾಜೆಕ್ಟು ಸಂಬಂಧಪಟ್ಟ ಬೇತಮಂಗಲದಲ್ಲಿ ಕೋಲಾರ ವೆಂಕಟಗಿರಿಕೋಟೆ ರಸ್ತೆಗೆ ಸೇರಿಸಲಿಕ್ಕೆ ಹೊಸ ರಸ್ತೆಯನ್ನು ಅಗಲಪಡಿಸಲಿಕ್ಕೂ ಮತ್ತು ನಟ್ಟಿಗೆ ಮಾಡುವ ಬಗ್ಯೂ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೇ ಸೆಕ್ಷ೯ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂ.	ಪಂಜರ್ ಹಿಸ್ಸೇದಾರರ ಹೆಸರು.	ಸರ್ವೆ. ನಂ.	ಸರ್ವೆ. ವಿವರ.	ವಿಸ್ತೀರ್ಣ.	ಆಕಾರ.	ತೆಗದುಕೊಳ್ಳಬೇಕಾಗಿರುವ ಜಮೀನು. ರಿ. ಸರ್ವೆ ನಂ.	ತೆಗದುಕೊಳ್ಳಬೇಕಾಗಿರುವ ಜಮೀನು. ಆಕಾರ.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಷರಾ.
				ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.					
1	ನಾರಣಪ್ಪ ಬಿನ್ ರಂಗಯ್ಯ ಕಲಾಲ್. ಕ್ರಯದಾರ್ರು ರೆವರೆಂಡ್ ಜೆ. ಬಿ. ಬಟ್ರಿಕ್ ಯವರು	526	ಖುಷ್ಕಿ	1 29	3 0 0	0 3	...	ಗಲ್ಲಿ	ನಂ. 526	ರಸ್ತೆ	ರಸ್ತೆ	ನಾಕಾರಿಣಾಂ
2	ಆಂಜನೇಯ ಸ್ವಾಮಿ	525	ಡಿಟೋ	3 34	4 0 0	0 ¼	...	ನಂ. 525	ಗಲ್ಲಿ	ರಸ್ತೆ	525	

ತಾರೀಖು 8ನೇ ಜೂ೯ 1903.

ನಂ. ರೆ. 4453—ರೆ. ಫೈ. 23–1896, ಮೈಸೂರ ಸರ್ವಿಸ್ ರೆಗ್ಯುಲೇಷ್ಷಗಳ 188ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮೆ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ರಿಗೆ 1903ನೇ ಮೇ 20ನೇ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನವರಿಗ್ಯೆ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ಎ೯. ಗೋಪಾಲಯ್ಯಂಗಾರ್ರು ತಮ್ಮ ಕೆಲಸಗಳಿಗೆ ಕುಂದಕವಿಲ್ಲದೆ ಮೆ॥ ಶ್ರೀನಿವಾಸಯ್ಯಂಗಾರ್ರ ಕೆಲಸಗಳನ್ನು ನೋಡತಕ್ಕದ್ದು.

ತಾರೀಖು 1ನೇ ಜೂನ್ 1903.

ನಂ. ಶ. 4426, ಸ॥ 1894ನೇ ಇಸವಿಯ VIIನೇ ನಂಬರ್ ಅನ್ವಯ ಅಕ್ಟೋಬರ್ ರಗ್ಸ್ಟ್ರೇಷನ 6ನೇ ಸೆಕ್ಷನ್ ಅನುಸಾರ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಲ್ಲಿ ವಿವರಿಸಲ್ಪಟ್ಟಿ ಜಮೀನುಗಳು ಸರ್ಕಾರ ಹೊಳಲಕ್ಕಿ ಅಂಚೆ, ಚಾಮರಾಜೇಂದ್ರ ರಿಜಿಸ್ಟ್ರಾರರ ಸಂಸ್ಥೀಜಾಗಿಗೆ ಸಂಬಂಧಪಟ್ಟ ಮೊಡಿ ಬಳ್ಳಿಪುರದ ತಾಲ್ಲೂಕಿನಲ್ಲಿರುವ ಬಾಣಜ ಮತ್ತು ಕಾಕೋಳಾಪುರದ ಜೊತ ಗ್ರಾಮ ನಿವಾಸಿಗಳಿಂದ ಕ್ರಯ ಮತ್ತು ಪೋಲ್ಡ ರಗ್ಸ್ಟ್ರೇಷನ 7ನೇ ಸೆಕ್ಷನ್ ಅನುಸಾರ ಬೆಂಗಳೂರಿನ ಪಬ್ಲಿಕ್ಟಿನ ಪೆಪ್ಪರ್‌ಟಿ ಕಮಿಷನರರು ಸದರೀ ಜಮೀನುಗಳನ್ನು ಹೊಂದುವಂತೆ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಸ್ಥಿರಾಸ್ತಿ ಇರುವ ಸ್ಥಳ	ಸ್ಥಿರಾಸ್ತಿಯ ಹೆಸರು.	ಸ್ಥಿರಾಸ್ತಿ	ಸ್ಥಿರಾಸ್ತಿ ನಂಬರ್.	ಜಮೀನಿನ ವಿವರ.				ಸ್ಥಿರಾಸ್ತಿಯ ಚತುರ್ಭದ್ದಿ.			ಚಕ್ಕು ಬಂದಿ.			
				ಎಕರೆ.	ಗುಂಟೆ.	ಆಕಾರ.	ಟಿ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬಾಣಜ	1. ಚನ್ನೆರಾಯ 2. ಸೀನಪ್ಪ 3. ಅಪ್ಪಣ್ಣ	ಮಾವು	2	9	28	15	0	ಸರ್ವೆ ನಂ. 4, 5 ಮತ್ತು 6	ಸರ್ವೆ ನಂ. 1 ಮತ್ತು 45	ಎನ್. ನಂ. 12	ಎನ್. ನಂ. 44				
	1. ಸೀನಪ್ಪ 2. ಪೆಂಕಟರಾಯ 3. ಚಿನ್ನಿ	ಹಿಟ್ಟುಗೇ	6	7	18	12	0	0	4	ಎನ್. ನಂ. 7	ಎನ್. ನಂ. 2,5 ಮತ್ತು 4	ಎನ್. ನಂ. 11	ಎನ್. ನಂ. 4 ಮತ್ತು 5		
	1. ಲಕ್ಷ್ಮಣಸಾಮಿ 2. ಸೀನಪ್ಪ 3. ಗೋಪಾಲ	ಹಿಟ್ಟುಗೇ	9	7	35	12	0	0	2	ಎನ್. ನಂ. 8	ಎನ್. ನಂ. 11	ಜೋಳದ ಕಾವಲಿಯ ಪುರದ ಸರಹದ್ದು ಗಳು	ಎನ್. ನಂ. 11 ಮತ್ತು 6		
	1. ತಿಮ್ಮನಾಯಕನ್ 2. ಲಕ್ಷ್ಮಣನಾಯಕನ್	ಹಿಟ್ಟುಗೇ	10	3	37	6	0	0	21	ಎನ್. ನಂ. 8 ಮತ್ತು 6	ಎನ್. ನಂ. 12	ಎನ್. ನಂ. 12ಮತ್ತು11	ಎನ್. ನಂ. 6		
	1. ಚಂದ 2. ಸೀನಪ್ಪ 3. ಅಪ್ಪಣ್ಣ 4. ಚಿಕ್ಕಯಪ್ಪ	ಹಿಟ್ಟುಗೇ	11	12	31	21	0	0	10	ಎನ್. ನಂ. 9	ಎನ್. ನಂ. 12ಮತ್ತು13	ಜೋಳದ ಕಾವಲಿಯ ಪುರದ ಸರಹದ್ದು ಗಳು	ಎನ್. ನಂ. 10		

| | | |

ತಾರೀಖು 2ನೇ ಜೂ೯ 1903.

ನಂ. 4433, ಸ೯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಆಕ್ವಿಜೀರ್ಷ ರೆಗ್ಯುಲೇಷನಿನ 6ನೇ ಸೆಕ್ಷ೯ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ಗೋಲ್ಡ್ ಫೀಲ್ಡ್ ವಾಟರ್ ಸಪ್ಲೈ ಪ್ರಾಜೆಕ್ಟಿಗೆ ಸಂಬಂಧಪಟ್ಟ ಬೇತಮಂಗಲದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖಾ ಸ್ಟ್ಯಾಫ್ ಕ್ವಾರ್ಟರ್ಸುಗಳಿಗೋಸ್ಕರ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೇ ಸೆಕ್ಷ೯ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡಿಪ್ಯೂಟಿ ಕಮಿಷನರವರು ಸದರಿ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಜಂಟಿಯ ನಂ.	ಖಾತೇದಾರರ ಹೆಸರು.	ಸರ್ವೆ ನಂ.			ಆಕಾರ.	ತೆಗದುಕೊಳ್ಳಬೇಕಾಗಿರುವ ಜಮೀನು.		ಚಕ್ಕುಬಂದಿ.			
		ನಂ.	ವಿವರ.	ವಿಸ್ತೀರ್ಣ.		ವಿಸ್ತಾರ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
				ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
1	ವೆಂಕಟಿಗ ತಳವಾರಿ	579	ಖುಷ್ಕಿ	8 6	13-0-0	0—27	..	ನಂ. 580	ನಂ. 579	ನಂ. 579	ಗಲ್ಲಿ

ತಾರೀಖು 8ನೇ ಜೂ೯ 1903.

ನಂ. ರೆ. 4456—ರೆ. ಫೈ. 19—1900, ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಎ. ಜಿ. ಕೃಷ್ಣಸ್ವಾಮಿರಾಯರಿಗೆ 1902ನೇ ನವಂಬರ್ 20ನೇ ಮಾರ್ಕ್ಕಂ ರೆ. 2279—ರೆ. ಫೈ. 19-1900ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳು 15 ದಿನಗಳ ಪ್ರಿವಿಲೇಜ್ ರಜಾವನ್ನು ಅವರು 1902ನೇ ಡಿಸೆಂಬರ್ 24ನೇ ತಾರೀಖಿನ ಪೂರ್ವಾಹ್ನದಲ್ಲಿ ಉಪಯೋಗಿಸಿಕೊಂಡು 1903ನೇ ಜನವರಿ 23ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 9ನೇ ಜೂ೯ 1903.

ನಂ. ರೆ. 4476, ಹಾಸನದ ಡಿಸ್ಟ್ರಿಕ್ಟು ಅರಕಲಗೂಡು ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಎಂ. ರಂಗನಾಥರಾಯರಿಗೆ 1902ನೇ ಆಕ್ಟೋಬರ್ 6ನೇ ಮಾರ್ಕ್ಕಂ ರೆ. 1532—ರೆ. ಫೈ. 103—96ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 3 ತಿಂಗಳುಗಳ ಪ್ರಿವಿಲೇಜ್ ರಜಾವನ್ನು ಅವರು 1902ನೇ ಆಗಸ್ಟ್ 13ನೇ ತಾರೀಖಿನ ಪೂರ್ವಾಹ್ನದಲ್ಲಿ ಉಪಯೋಗಿಸಿಕೊಂಡು 1902ನೇ ಆಗಸ್ಟ್ 26ನೇ ತಾರೀಖಿನ ಮಧ್ಯಾಹ್ನಾತ್ಪರ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ಫಾರೆಸ್ಟ್.

ಇಸ್ತಿಹಾರ್ನಾಮಾ.

ತಾರೀಖು 6ನೇ ಜೂ೯ 1903.

ನಂ. 806—7685, ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಫಾರೆಸ್ಟ್ಸ್ ಸೆಟ್ಲ್‌ಮೆಂಟ್ ಆಫಿಸರಾದ ಮೆ॥ ಬಿ. ರಾಮಸ್ವಾಮಿ ಅಯ್ಯರ್, ಬಿ. ಎ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ 1903ನೇ ಮಾರ್ಚಿ 1ರ ಲಾಗಾಯತು 21ರ ವರಿವಿಗೆ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜೀಬ್,
ಜೆ. ಇ. ರಿಕೆಟ್ಸ್,
ಫಾರ್ ಫಾರೆಸ್ಟ್ಸ್ ಇಲಾಖೆಯ ಗವರ್ನಮೆಂಟ್ಸ್‌ಅಫೀಷಿಯೇಟಿಂಗ್ ಸೆಕ್ರಿಟೆರಿ.